ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ–ರವರ ಕಛೇರಿ,
ಕಾ&ಪಾ ಉಪ–ವಿಭಾಗ, ಚಾವಿಸನಿನಿ,
ಬಿಳಿಕೆರೆ. Telephone No: 9448499992

**CHAMUNDESHWARI ELECTRICITY SUPPLY CORPORATION LIMITED**
**(A Government of Karnataka Undertaking)**
**Office Of: Assistant Executive Engineer Ele**
**O&M Sub-Division, Bilikere**
Web Site: https://cescmysore.karnataka.gov.in
E-mail ID:

**Company Identity Number(CIN): U40109KA2004SGC035177**

ಕ್ರಮಾಂಕ: ಚಾವಿಸನಿನಿ/ಉ.ವಿ/ಬಿಳಿಕೆರೆ/ಸ.ಕಾ.ನಿ.ಇಂ(ವಿ)/ಸ.ಇಂ(ತಾಂ)/2021-22/ 744 ದಿನಾಂಕ: 24/12/2021

ದಿನಾಂಕ: 24.12.2021 ರಂದು ಮಧ್ಯಾಹ್ನ 03:00 ಗಂಟೆಗೆ ಶ್ರಿ ಸುನಿಲ್‌ಕುಮಾರ್.ಎ.ಎ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪವಿಭಾಗದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ನಡಾವಳಿಗಳು.

**<u>ಸಭೆಯಲ್ಲಿ ಹಾಜರಿದ್ದವರು:</u>**

1. ಶ್ರೀ ಸುನಿಲ್ ಕುಮಾರ್.ಎ.ಎ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಹುಣಸೂರು.
2. ಶ್ರೀಮತಿ ವಿಜಯರತ್ನ.ಸಿ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
3. ಶ್ರೀ ಮಣಿಕಂಠ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
4. ಶ್ರೀ ಜಯಕುಮಾರ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
5. ಶ್ರೀ ಜಯಕುಮಾರ್, ಕಿರಿಯ ಇಂಜಿನಿಯರ್(ವಿ) ಪ್ರಭಾರ, ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
6. ಶ್ರೀ ಮಲ್ಲಿಕಾರ್ಜುನ ಎಂ, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.
7. ಶ್ರೀಮತಿ ಸುಕ್ರಮ್ಮ, ಹಿರಿಯ ಸಹಾಯಕರು(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.

ಸಭೆಯಲ್ಲಿ ಉಪ–ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿದೇಶದನ್ವಯ ಪ್ರತಿ ಮುರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಜನ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಸೇವೆಯನ್ನು ಉನ್ನತ್ತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ವಿದ್ಯುತ್ ಮಾರ್ಗಗಳಿಂದ ಉಂಟಾಗಬಹುದಾದ ಅಪಘಾತಗಳನ್ನು ತಡೆಗಟ್ಟುವಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ.
- ತಂತಿ ಬೇಲಿಗೆ ವಿದ್ಯುತ್ ಹರಿಸಬೇಡಿ ಇದು ಶಿಕ್ಷಾರ್ಹ ಅಪರಾಧ
- ವಿದ್ಯುತ್ ತಂತಿಗಳಿಗೆ ಸಿಲುಕಿದ ಗಾಳಿಪಟವನ್ನು ಬಿಡಿಸಲು ಪ್ರಯತ್ನಿಸಬೇಡಿ.
- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ

- ವಾಹನಗಳಲ್ಲಿ ಮಿತಿಗಿಂತ ಹೆಚ್ಚಾಗಿ ಸಾಮಾಗ್ರಿಗಳನ್ನು ಸಾಗಿಸಬೇಡಿ
- ಲೋಹದ ವಸ್ತುವನ್ನು ಉಪಯೋಗಿಸುವಾಗ ಮೇಲೆ ಹಾದು ಹೋಗಿರುವ ವಿದ್ಯುತ್ ಮಾರ್ಗದ ಬಗ್ಗೆ ಎಚ್ಚರ ವಹಿಸಿ.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 01 | ಬಿಳಿಕೆರ ಗ್ರಾಮಸ್ಥರು | ಬಿಳಿಕೆರೆ ಗ್ರಾಮಸ್ಥರು ಸಭೆಯಲ್ಲಿ ಬಿಳಿಕೆರೆ ಟೌನ್ ಗ್ರಾಮದಲ್ಲಿ ವಿದ್ಯುತ್ ಅಡಚಣೆಯ ಸಮಸ್ಯೆಯು ಹೆಚ್ಚಿದ್ದು, ಆಗಾಗ್ಗೆ ವಿದ್ಯುತ್ ಕಡಿತಗೊಳ್ಳುತ್ತಿರುತ್ತದೆ, ಸಮಸ್ಯೆಯನ್ನು ಸರಿಪಡಿಸಲು ಕೋರಿರುತ್ತಾರೆ. | ವಿದ್ಯುತ್ ಅಡಚಣೆಗೆ ಬಗ್ಗೆ ಶಾಖಾಧಿಕಾರಿಗಳು ಮಾಹಿತಿ ಪಡೆದು, ಇತರೆ ಐ.ಪಿ ಫೀಡರ್‌ಗಳ ಮಾರ್ಗ ದೋಷ ಸರಿಪಡಿಸಲು ಟೌನ್ ಫೀಡರ್‌ನ ಮಾರ್ಗಮುಕ್ತತೆ ಪಡೆಯುತ್ತಿರುವುದು ಕಂಡು ಬಂದ ಹಿನ್ನಲೆಯಲ್ಲಿ ಆಲನಹಳ್ಳಿ ಮತ್ತು ಕ್ಯಾತನಹಳ್ಳಿ ಮಾರ್ಗಗಳಿಗೆ ಹಾಗೂ ಬಿಳಿಕೆರೆ ಟೌನ್ ಮಾರ್ಗಕ್ಕೆ ಪ್ರತ್ಯೇಕ GOS ಗಳನ್ನು ಅಳವಡಿಸುವ ಮುಖಾಂತರ ವಿದ್ಯುತ್ ಅಡಚಣೆ ತಪ್ಪಿಸಲು ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಲಾಯಿತು. |
| 02 | ಚನ್ನೇಗೌಡ, ಕಾಳೇಗೌಡನಕೊಪ್ಪಲು | ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | ಅರ್ಜಿದಾರರಿಗೆ ಸ್ವಯಂ ನಿರ್ವಹಣಾ ಯೋಜನೆಯಡಿಯಲ್ಲಿ ನಿರಂತರ ವಿದ್ಯುತ್ ಸಂಪರ್ಕ ಪಡೆಯಲು ಅವಕಾಶವಿರುವ ಬಗ್ಗೆ ತಿಳಿಸಲಾಯಿತು. |
| 03 | ಸುರೇಶ್ ಎಂ. ಬಿನ್ ಮಾದೇಗೌಡ. ಚಲ್ಲಹಳ್ಳಿ | ತೋಟದ ಮಧ್ಯಭಾಗದಲ್ಲಿರುವ ವಿದ್ಯುತ್ ಕಂಬಗಳನ್ನು ಬೇರೆ ಕಡೆಗೆ ಬದಲಾಯಿಸಿಕೊಡುವಂತೆ ಕೋರಿದರು. | ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸ್ವಯಂ ನಿರ್ವಹಣಾ ಕಾಮಗಾರಿಯಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಲಾಯಿತು. |
| 04 | ಸಿದ್ದೇಗೌಡ.ಎಸ್ ಸೋನಹಳ್ಳಿ ಗ್ರಾಮ | ವಿದ್ಯುತ್ ತಂತಿಯ ಪಕ್ಕದಲ್ಲಿರುವ ಮರವನ್ನು ತೆರವುಗೊಳಿಸುವಂತೆ ಕೋರಿದರು. | ಶಾಖಾಧಿಕಾರಿಗಳಿಗೆ ಶೀಘ್ರದಲ್ಲಿ ವಿದ್ಯುತ್ ತಂತಿಗೆ ತಗಲುತ್ತಿರುವ ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 05 | ದೇವರಹಳ್ಳಿ ಗ್ರಾಮಸ್ಥರು | ಸುಟ್ಟುಹೋಗಿರುವ ದೇವರಹಳ್ಳಿ ಗ್ರಾಮದ ದೇವರಹಳ್ಳಿ ಕಲೋನಿ ಐ.ಪಿ ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಕೋರಿದರು. | ನಿಗದಿತ ಅವಧಿಯೊಳಗೆ ಪರಿವರ್ತಕದ ಬದಲಾವಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. |

ಸ್ವೀಕರಿಸಿದ ದೂರುಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಶಾಖಾಧಿಕಾರಿಗಳಿಗೆ ಸೂಚಿಸುತ್ತಾ 5-30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ, ಬಿಳಿಕೆರೆ